ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**
**ಸ್ಪೆಷಲ್ ಕೇಸ್ ನಂಬರ್ : 103/2015**

**ಫ್ರಾಸಾ- 4 ಚಾಸಾ- 5**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಶ್ವೇತಾ ಎನ್ |
| ತಂದೆಯ ಹೆಸರುಃ | : | ತಿಮ್ಮಪ್ಪ ಗೌಡ |
| ವಯಸ್ಸುಃ | : | 43 ವರ್ಷ |
| ಉದ್ಯೋಗಃ | : | ಹಾಸ್ಟೆಲ್ ವಾರ್ಡನ್ |
| ವಾಸ | : | ಹಾಸನ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 25-04-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

2011 ರಿಂದ ನಾನು ಹಾಸನ ಸಮಾಜಕಲ್ಯಾಣ ಇಲಾಖೆಯ ಹಾಸ್ಟೆಲ್ ನಲ್ಲಿ ವಾರ್ಡನ್ ಆಗಿ ಕೆಲಸ ಮಾಡುತ್ತಿದ್ದೇನೆ.

2.ದಿಃ25-7-2013ರಂದು ನನ್ನ ಮೇಲಧಿಕಾರಿಗಳು ನನಗೆ ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಿ ತನಿಖಾಧಿಕಾರಿಯಮುಂದೆ ವರದಿ ಮಾಡಿಕೊಳ್ಳಬೇಕೆಂದು ಸಾಯಂಕಾಲ 5 ಗಂಟೆಗೆ ತಿಳಿಸಿದರು. ಅದರಂತೆ ನಾನು ಲೋಕಾಯುಕ್ತ ಪೊಲೀಸ್ ಠಾಣೆಗೆ ಹೋಗಿ ತನಿಖಾಧಿಕಾರಿಯಾಗಿದ್ದ ಚಾಸಾ-69ರವರನ್ನು ಭೇಟಿಯಾದೆನು.ಅವರು ಚಾಸಾ-1ರವರ ಬಳಿ ವರದಿ ಮಾಡಿಕೊಳ್ಳುವಂತೆ ಹೇಳಿದರು. ಚಾಸಾ-1ರವರ ಬಳಿ ಹೋದಾಗ ಅವರು ಮಾರನೇದಿನ ಬೆಳಿಗ್ಗೆ 5 ಗಂಟೆಗೆ ಠಾಣೆಗೆ ಹಾಜರಾಗುವಂತೆ ಹೇಳಿದರು. ಅದರಂತೆ 26-7-2013ರಂದು ನಾನು ಲೋಕಾಯುಕ್ತ ಠಾಣೆಗೆ ಹೋದೆನು. ನಾನು ಅಲ್ಲಿಗೆ ಹೋದಾಗ

ಹಾಸನ ಅಬಕಾರಿ ಇಲಾಖೆಯ ಪ್ರ.ದ.ಸ. ಎ ಹೆಚ್ ಕೃಷ್ಣಮೂರ್ತಿ ಎಂಬುವವರೂ ಇದ್ದರು. ಅಲ್ಲಿಂದ ಚಾಸಾ-1ರವರು ಇಲಾಖಾ ವಾಹನದಲ್ಲಿ ಗಂಜಿಗೆರೆ ಗ್ರಾಮಕ್ಕೆ ಕರೆದುಕೊಂಡು ಹೋದರು. ಅಲ್ಲಿಗೆ ಹೋದಾಗ ಸಮಯ ಸುಮಾರು 6-30 ಗಂಟೆ ಆಗಿತ್ತು. ಅಲ್ಲಿಂದ ಆನಂದ್ ಎಂಬುವವರ ತಾಯಿ ವಾಸವಿದ್ದ ಮನೆಗೆ ಕರೆದುಕೊಂಡು ಹೋದರು. ಅಲ್ಲಿ ಹೋಗಿ ಬಾಗಿಲು ಬಡಿದಾಗ ಸೋಮೇಗೌಡ ಎಂಬುವವರು ಬಾಗಿಲು ತೆರೆದರು. ಮುತ್ತಮ್ಮ, ಮಮತಾ ಎಂಬುವವರು ಇದ್ದರು, ಸದರಿ ಸೋಮೇಗೌಡ ಆನಂದ್ ಎಂಬುವವರ ಭಾಮೈದ ಎಂದು ಗೊತ್ತಾಯಿತು. ತನಿಖಾಧಿಕಾರಿಯು ಪ್ರಕರಣದ ವಿಚಾರವನ್ನು ಅವರಿಗೆ ತಿಳಿಸಿ ವಾರೆಂಟನ್ನು ತೋರಿಸಿದರು. ನಮ್ಮನ್ನೆಲ್ಲ ಕರೆದುಕೊಂಡು ಚಾಸಾ1ರವರು ಆ ಮನೆ ಒಳಗೆ ಹೋದರು. ಮನೆಯ ಹಾಲ್ ನಲ್ಲಿ ಯಾವುದೇ ವಸ್ತುಗಳು ಕಂಡುಬರಲಿಲ್ಲ. ಅಡುಗೆ ಮನೆ ಹಾಲ್ ನಲ್ಲಿ ಒಂದು ಕಬ್ಬಿಣದ ಬೀರುವಿನಲ್ಲಿ ಸೀರೆಗಳು ಮತ್ತು ಚಿನ್ನದ ಆಭರಣಗಳು ಇರುವುದು ಕಂಡುಬಂತು. ಅದರ ಮೌಲ್ಯವನ್ನು ತನಿಖಾಧಿಕಾರಿಗಳು ಲೆಕ್ಕ ಹಾಕಿದರು. ಆ ಚಿನ್ನಾಭರಣಗಳನ್ನು ಅವರ ವಶಕ್ಕೆ ನೀಡಿದರು. ಅಲ್ಲಿ 5 ರೇಷ್ಮೆ ಸೀರೆಗಳಿದ್ದು ಅವುಗಳ ಅಂದಾಜು ಮೌಲ್ಯ 12000 ಎಂದು ಅಲ್ಲಿ ಸುಮಾರು 20 ನೈಲಾನ್ ಸೀರೆಗಳಿದ್ದು ಅವುಗಳ ಮೌಲ್ಯ ಸುಮಾರು 5ಸಾವಿರ ಎಂದು ಅಂದಾಜಿಸಿದರು. 20ಗ್ರಾಂನ ನೆಕ್ಲೆಸ್ ಇದ್ದು ಅದರ ಮೌಲ್ಯ ಸುಮಾರು 20ಸಾವಿರ, 20ಗ್ರಾಂನ ಗುಂಡು ಸರ ಇದ್ದು ಅದರ ಮೌಲ್ಯ 20ಸಾವಿರ ಎಂದು, 3ಜೊತೆ ಓಲೆಗಳಿದ್ದು ಅದರ ಮೌಲ್ಯ 10ಸಾವಿರ ಎಂದು ಅಂದಾಜು ಮಾಡಿದರು. ಮಮತಾ ರವರು ಧರಿಸಿದ್ದ 20ಗ್ರಾಂನ ಮಾಂಗಲ್ಯ ಸರದ ಮೌಲ್ಯ 10ಸಾವಿರ ಎಂದು, ಮುತ್ತಮ್ಮರವರು ಧರಿಸಿದ್ದ 20ಗ್ರಾಂನ ಚಿನ್ನದ ಸರದ ಮೌಲ್ಯ 10ಸಾವಿರ ರೂ ಎಂದು ಅಂದಾಜಿಸಿದರು. ರೂಮುಗಳಲ್ಲಿ ಯಾವುದೇ ವಸ್ತುಗಳು ಸಿಗಲಿಲ್ಲ. ದನದ ಕೊಟ್ಟಿಗೆಯನ್ನು ಪರಿಶೀಲಿಸಿದಾಗ 3 ಎಮ್ಮೆಗಳು ಇದ್ದು ಅವುಗಳ ಮೌಲ್ಯ 30ಸಾವಿರ ಹಾಗು4 ಎಮ್ಮೆಕರುಗಳಿದ್ದು ಅವುಗಳ ಮೌಲ್ಯ 20ಸಾವಿರ ಎಂದು ಅಂದಾಜಿಸಿದರು. ಪಕ್ಕದಲ್ಲಿದ್ದ ಇನ್ನೊಂದು ದನದ ಕೊಟ್ಟಿಗೆ ಪರಿಶೀಲಿಸಿದಾಗ ಅದರಲ್ಲಿ ಸಿಂಧಿ ಜಾತಿಯ ಹಾಗು ನಾಟಿ 4 ಹಸುಗಳಿದ್ದು ಅವುಗಳ ಮೌಲ್ಯ ಅಂದಾಜು

50ಸಾವಿರ ಎಂದು, ಕರು ಇದ್ದು ಅದರ ಮೌಲ್ಯ 8ಸಾವಿರ ರೂ ಎಂದು ಅಂದಾಜಿಸಿದರು. ಈ ಬಗ್ಗೆ ಬರೆದುಕೊಂಡು ನಿಪಿ-4ರಂತೆ ಮಹಜರು ಮಾಡಿ ನಮ್ಮ ಸಹಿ ಪಡೆದುಕೊಂಡರು. ನಿಪಿ-4ರಲ್ಲಿ ನನ್ನ ರುಜು ಇದ್ದು ಅದನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು.

3.ಅಲ್ಲಿಂದ ಹಾಸನದ ಉದಯಗಿರಿಯಲ್ಲಿರುವ ಆನಂದ ಎಂಬುವವರ ಮನೆಗೆ ಕರೆದುಕೊಂಡು ಬಂದರು. ಅಲ್ಲಿ ಆರೋಪಿತರಿಗೆ ಸಂಬಂಧಿಸಿದ ಕೆಲವು ದಾಖಲಾತಿಗಳು ಆರೋಪಿತರ ಹೆಂಡತಿಯ ತಂದೆ ಜಯರಾಂ ರವರ ಮನೆಯಲ್ಲಿ ಇದೆ ಎಂಬ ಬಗ್ಗೆ ಮಾಹಿತಿ ದೊರೆತ ಕಾರಣ ತನಿಖಾಧಿಕಾರಿಯು ನಮ್ಮನ್ನು ಕುವೆಂಪುನಗರದ 1ನೇಹಂತದ 10ನೇ ಕ್ರಾಸ್ ನಲ್ಲಿರುವ ಮನೆನಂಬರ್ 355ಕ್ಕೆ ಕರೆದುಕೊಂಡು ಹೋದರು. ಶೋಧನೆ ಮಾಡಿದಾಗ, ಅವರ ಬೆಡ್ ರೂಂನ ಒಂದು ಸೂಟಿಕೇಸಿನಲ್ಲಿ ಆನಂದ್ ರವರ ಹೆಂಡತಿಯ ಹೆಸರಿನಲ್ಲಿರುವ ಕೆಲವು ದಾಖಲೆಗಳು ಸಿಕ್ಕಿದವು. ಆನಂದ್ ರವರ ಹೆಂಡತಿಯ ಹೆಸರಿನಲ್ಲಿಇದ್ದ ಗುರು ಟೇಕ್ ಇನ್ವೆಸ್ಟ್ಮೆಂಟ್ ಪ್ರೈವೇಟ್ ಲಿಮಿಟೆಡ್ ಮೈಸೂರು ಮತ್ತು ಯು ಟಿ ಐ ಮ್ಯೂಚುವಲ್ ಫಂಡ್ ಗೆ ಸಂಬಂಧಿಸಿದ ದಾಖಲೆಗಳು ಕಂಡುಬಂದವು. ಅವುಗಳನ್ನು ವಶಪಡಿಸಿಕೊಂಡರು. ಹಾಗೆಯೇಆನಂದ್ ರವರ ಮಗನ ಹೆಸರಿನಲ್ಲಿದ್ದ ಮ್ಯೂಚುವಲ್ ಫಂಡ್ ನ ದಾಖಲೆಗಳನ್ನು ವಶಪಡಿಸಿಕೊಂಡರು. ಈ ಬಗ್ಗೆ ನಿಪಿ-10ರಂತೆ ಮಹಜರ್ ಮಾಡಿದರು. ಅದರಲ್ಲಿ ನನ್ನ ರುಜು ಇದ್ದು ನಿಪಿ-10(ಬಿ) ಎಂದು ಗುರುತಿಸಲಾಯಿತು.

4.ಅಲ್ಲಿಂದ ಆನಂದ್ ರವರು ಕೆಲಸ ಮಾಡುತ್ತಿದ್ದ ನಗರಸಭೆಯ ಕೊಠಡಿಗೆ ಕರೆದುಕೊಂಡು ಬಂದರು. ಅಲ್ಲಿ ಯಾವುದೇ ದಾಖಲೆಗಳು ಸಿಗಲಿಲ್ಲ. ಅಲ್ಲಿಯೂ ಸಹ ನಿಪಿ-12ರಂತೆ ಮಹಜರ್ ಮಾಡಿದರು. ಅದಕ್ಕೆ ನಾನು ರುಜು ಹಾಕಿದ್ದು ನಿಪಿ-12(ಬಿ) ಎಂದು ಗುರುತಿಸಲಾಯಿತು. ನಂತರ ನಮ್ಮನ್ನು ಬಿಡುಗಡೆಗೊಳಿಸಿದರು.

**ಪಾಟೀಸವಾಲುಃ ಆರೋಪಿ ಪರ ವಕೀಲರಿಂದಃ**

(ವಕೀಲರು ಗೈರುಹಾಜರಿರುವುದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**